No instances of stoppage of this allowance has come to the notice of Government. However it will be reverified and all the Deputy Commissioners including the Deputy Commissioners of Bijapur and Gulbarga will be instructed to pay the allowance to the beneficiaries immediately.

(vi) ಸುಳ್ಯದಿಂದ ಬೆಂಗಳೂರಿಗೆ ಸುಖಾಸೀನ ಬಸ್ ಒದಗಿಸಲು ಮನವಿ

ಶ್ರೀ ಕೆ. ಕೇಶವ —ಮಾನ್ಯ ಅಧ್ಯಕ್ಷರೇ ಸುಳ್ಯ ತಾಲ್ಲೂಕು ಕೇಂದ್ರದಿಂದ ಬೆಂಗಳೂರಿಗೆ ಬಿಡುವ ಸುಖಾಸೀನ ಸಾರಿಗೆ ಸಂಸ್ಥೆ ಬಸ್ಸನ್ನು ಒದಗಿಸುವಂತೆ ಸರಕಾರವನ್ನು ಹಲವು ಬಾರಿ ಲಿಖಿತ ಮೂಲಕ ಕೇಳಿ ಕೊಂಡರೂ ಈ ತನಕ ಬಸ್ಸನ್ನು ನೀಡುವಲ್ಲಿ ಸರಕಾರ ಅಸಮರ್ಥವಾಗಿರುತ್ತದೆ. ಇದು ತೀರಾ ಬೇಸರದ ಸಂಗತಿಯಾಗಿರುತ್ತದೆ ರಾಜ್ಯಾದ್ಯಂತ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಯೂ ಬೆಂಗಳೂರಿಗೆ ಓಡುವ ಒಂದು ಎರಡು ಬಸ್ಸುಗಳು ಸರ್ವೆ ಸಾಮಾನ್ಯವಾಗಿ ಇದ್ದೆ ಇವೆ. ಸುಳ್ಯ ತಾಲ್ಲೂಕು ಕೇಂದ್ರದಿಂದ ಬೆಂಗಳೂರಿಗೆ ಓಡಿಸುವ ಬಸ್ಸಿಗೆ ಪ್ರಯಾಣಿಕರು ಕಡಿಮೆ ಲುಕ್ಸಾನದಲ್ಲಿ ಓಡಬೇಕಾಗುವುದು ಎನ್ನುವುದು ಸರಿಯಲ್ಲ. ಸುಳ್ಯ ಮಾರ್ಗವಾಗಿ ಬೆಂಗಳೂರು ಡಿಪೋದಿಂದ ಬಿಡುವ ಕಾಸರಗೂಡು, ವಿಟ್ಲ, ಪುತ್ತೂರು, ಸುಳ್ಯ, ಮಡಿಕೇರಿ ಮೈಸೂರು ಬೆಂಗಳೂರು ಬಸ್ಸು ಪುತ್ತೂರು ಡಿಪೋದಿಂದ ಬಿಡುವ ಪುತ್ತೂರು, ಬೆಳ್ಳಾರೆ, ಸುಳ್ಯ, ಮಡಿಕೇರಿ ಮೈಸೂರು ಬೆಂಗಳೂರು ಬಸ್ಸು ಇವುಗಳಿಗೆ ಸೀಟು ಕಾದಿರಿಸಲು ಸುಳ್ಯದಲ್ಲಿ ಬುಕ್ಕಿಂಗ್ ಕೌಂಟರ್ ಇರುವುದಿಲ್ಲ ಮತ್ತು ಈ ಬಸ್ಸುಗಳು ಈಗಾಗಲೇ ಲುಕ್ಸಾನದಲ್ಲಿ ಓಡುತ್ತಿರುವುದು ಎಂದು ತಪ್ಪು ವರದಿಯನ್ನು ಪುತ್ತೂರು ಡಿಪೋ ಮ್ಯಾನೇಜರ್ ಉದ್ದೇಶಪೂರ್ವಕವಾಗಿ ನೀಡುತ್ತಿರುವರು ಈ ಎರಡೂ ಬಸ್ಸುಗಳು ಹೆಚ್ಚು ಪ್ರಯಾಣಿಕರನ್ನು ತುಂಬಿಸಿಕೊಂಡು ಸೀಟು ಇಲ್ಲದೆ ದಿನನಿತ್ಯ ನಿಂತುಕೊಂಡು ಪ್ರಯಾಣಿಸುತ್ತಿರುವುದು ಕಾಣುತ್ತಿದ್ದೇವೆ. ಸುಳ್ಯದಿಂದ ಬೆಂಗಳೂರು ಪ್ರಯಾಣಿಸುವ ಜನತೆಗೆ ದಿನನಿತ್ಯ ತೊಂದರೆಯಾಗುತ್ತಿದೆ. ಈ ಡಿಪೋ ಮ್ಯಾನೇಜರ್ ನೀಡುತ್ತಿರುವ ತಪ್ಪು ಮಾಹಿತಿಯನ್ನು ಸರಕಾರ ಗಂಭೀರವಾಗಿ ಪರಿಶೀಲಿಸಿ ಸುಳ್ಯ ತಾಲ್ಲೂಕು ಕೇಂದ್ರಕ್ಕೆ ಸುಖಾಸೀನ ಬಸ್ಸನ್ನು ಒದಗಿಸುವಂತೆ ಸರಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್ (ಕಂದಾಯ ಸಚಿವರು).—ಮಾನ್ಯ ಸಾರಿಗೆ ಸಚಿವರ ಪರವಾಗಿ ಈ ಹೇಳಿಕೆ ನೀಡುತ್ತೇನೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬೆಂಗಳೂರಿನಿಂದ ಮೈಸೂರು ಮಡಿಕೇರಿ ಮತ್ತು ಸುಳ್ಯ ಮಾರ್ಗವಾಗಿ ಕಾಸರಗೋಡು ಮತ್ತು ಕುಂದಾಪುರಗಳಿಗೆ ಎರಡು ಸುಖಾಸೀನ ಸಾರಿಗೆಗಳ ಸೌಕರ್ಯವನ್ನು ಒದಗಿಸಿದೆ. ಸುಳ್ಯ ಮತ್ತು ಬೆಂಗಳೂರಿನ ನಡುವೆ ಸುಖಾಸೀನ ಸಾರಿಗೆಯನ್ನು ಬಯಸುವ ಪ್ರಯಾಣಿಕರು ಈ ಸಾರಿಗೆಗಳ ಉಪಯೋಗವನ್ನು ಪಡೆಯುತ್ತಿದ್ದಾರೆ. ಈ ಸಾರಿಗೆಗಳ ಸಂಚಾರ ಆದಾಯವನ್ನು ಗಮನಿಸಿದಲ್ಲಿ ಮಾರ್ಗ ಮಧ್ಯೆ ಇವುಗಳ ಸಂಪರ್ಕವನ್ನು ಬಯಸುವ ಪ್ರಯಾಣಿಕರಿಗೆ ಯಾವ ಅಡಚಣೆಯೂ ಇಲ್ಲದೆ ಸ್ಥಳಾವಕಾಶ ದೊರೆಯುವುದು ಉಚಿತ. ಆದ್ದರಿಂದ, ಸುಳ್ಯದಿಂದ ಬೆಂಗಳೂರಿಗೆ ಪ್ರತ್ಯೇಕ ಸುಖಾಸೀನ ಸಾರಿಗೆಯನ್ನು ಪ್ರಾರಂಭಿಸುವ ತಕ್ಷಣದ ಅಗತ್ಯ ಕಾಣದು. ಆದಾಗ್ಯೂ ಸಂಜೆ ೧೯೧೫ಕ್ಕೆ ಕುಂದಾಪುರದಿಂದ ಹೊರಟು ಸುಳ್ಯ ಮಾರ್ಗವಾಗಿ (ಸುಳ್ಯ ಆಗಮನ-ನಿರ್ಗಮನ ೨೨೫೦) ಬೆಂಗಳೂರಿಗೆ ಸಂಚರಿಸುತ್ತಿರುವ ಸುಖಾಸೀನ ಸಾರಿಗೆಯಲ್ಲಿ ಸಧ್ಯಕ್ಕೆ ಸುಳ್ಯದ ಪ್ರಯಾಣಿಕರಿಗೆ ಎರಡು ಆಸನಗಳನ್ನು (ಆಸನಗಳ ಸಂಖ್ಯೆ ೧೧ ಮತ್ತು ೧೨) ನಿಗದಿಪಡಿಸಲಾಗುವುದು. ನಂತರ ಆವಶ್ಯಕತೆ ಕಂಡುಬಂದಲ್ಲಿ ಸುಳ್ಯದಿಂದ ಬೆಂಗಳೂರಿಗೆ [ಸುಖಾಸೀನ ಸಾರಿಗೆಯನ್ನು ಮಳಿಗಾಲ ಕಳೆದನಂತರ ಪ್ರಾಯೋಗಿಕವಾಗಿ ಪ್ರಾರಂಭಿಸಿ ನೋಡಲಾಗುವುದು.

(vii) ಕುಂದಾಪುರ ಆಸ್ಪತೆಯ ಆಂಬ್ಯುಲೆನ್ಸ್ ರಿಪೇರಿ ಮತ್ತು ಚಾಲಕನ ಹುದ್ದೆಯ ಮಂಜೂರಾತಿ

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಕುಂದಾಪುರ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಈಗ ನಾಡುರಸ್ತೆಯಲ್ಲಿರುವ ಆಂಬ್ಯುಲೆನ್ಸ್ ಇದ್ದು, ಈ ಆಂಬ್ಯುಲೆನ್ಸ್‌ಗೆ ಚಾಲಕ ಸಹಾ ಇರುವುದಿಲ್ಲ. ಆದ್ದರಿಂದ ಕೂಡಲೇ ಆಂಬ್ಯುಲೆನ್ಸ್‌ನ್ನು ರಿಪೇರಿ ಮಾಡಿಸಿ ಅಥವಾ ಹೊಸ ಆಂಬುಲೆನ್ಸ್ ಒದಗಿಸಿ ಇದಕ್ಕೆ ಚಾಲಕನ ಹುದ್ದೆ ಮಂಜೂರು ಮಾಡಬೇಕಾಗಿ ಸರಕಾರವನ್ನು ಕೋರುತ್ತೇನೆ.